sdmimd

Kannada Prabha

Date: Sunday, November 17, 2013

Page No. 10

Edition: Mysore

Language: Kannada

### ವಿವೇಕಾನಂದ ವಿಚಾರಗೋಷ್ಠಿಯಲ್ಲಿ ನಿರ್ಮಲಾನಂದನಾಥಶ್ರೀ

# ಯುವಜನತೆಗೆ ಆಧ್ಯಾತ್ಮದ ಅರಿವು ಅವಶ್ಯ

**ಕ.ಪ್ರ.ವಾರ್ತೆ | ಮೈಸೂರು | ನ. 16**

ಇಂದು ಯುವಜನತೆಗೆ ಆಧ್ಯಾತ್ಮದ ಅರಿವು ಅವಶ್ಯಕ ಎಂದು ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧೀಶ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಸ್ವಾಮಿ ವಿವೇಕಾನಂದ 150ನೇ ಜನ್ಮವರ್ಷಾಚರಣೆ ಸಮಿತಿಯು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂಐಎಂಡಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ವಿವೇಕಾನಂದ ವಿಚಾರ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಜಾಗತಿಕರಣದ ಹಿನ್ನೆಲೆಯಲ್ಲಿ ಶಿಕ್ಷಣದಲ್ಲಿ ವಿಜ್ಞಾನ ಆಧ್ಯಾತ್ಮದ ಸಮನ್ವಯದ ಸವಾಲು ಎಂಬ ವಿಷಯ ಕುರಿತು ಮಾತನಾಡಿದ ಶ್ರೀಗಳು, ದೇಶದ ಸಮಗ್ರ ಅಭಿವೃದ್ಧಿಗೆ ಕೇವಲ ವಿಜ್ಞಾನ ಮಾತ್ರವೇ ಮುಖ್ಯವಾಗದು, ವಿಜ್ಞಾನದಲ್ಲಿ ಆಧ್ಯಾತ್ಮಿಕತೆ ಬೆರೆತಾಗ ಮಾತ್ರ ಇಂದಿನ ಸವಾಲುಗಳು ಮತ್ತು ಸಮಸ್ಯೆಗಳನ್ನು ಎದುರಿಸಲು ಸಾಧ್ಯ ಎಂದರು.

ಪದವಿ ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ಕುರಿತು ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಮೈಸೂರು ವಿವಿಯ ಅರ್ಥಶಾಸ್ತ್ರ ವಿಭಾಗದ ವಿದ್ಯಾರ್ಥಿನಿ ಕೆ.ಜೆ. ದೀಪ ಪ್ರಥಮ, ಮದ್ದೂರು ಭಾರತಿ ಕಾಲೇಜು ವಿದ್ಯಾರ್ಥಿ ಎಸ್. ಹರೀಶ್‌ಕುಮಾರ್ ದ್ವಿತೀಯ ಹಾಗೂ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಂಶೋಧನಾ ವಿದ್ಯಾರ್ಥಿ ಗಿರೀಶ್ ಮೂಗತಿಹಳ್ಳಿ ತೃತೀಯ ಬಹುಮಾನ ಪಡೆದರು.

ವಿಜೇತರಿಗೆ ಕುವೆಂಪು ವಿವಿಯ ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದ ಗೌಡ ಬಹುಮಾನ ವಿತರಿಸಿದರು. ಸಾಮಾಜಿಕ ಕಾರ್ಯಕರ್ತ ಚಕ್ರವರ್ತಿ ಸೂಲಿಬೆಲೆ ಅವರು ದಿಕ್ಸೂಚಿ ಭಾಷಣ ಮಾಡಿದರು.

ಮಹಾರಾಜ ತಾಂತ್ರಿಕ ಸಂಸ್ಥೆ ಅಧ್ಯಕ್ಷ ಮುರಳಿ ಮುಖ್ಯ ಅತಿಥಿಯಾಗಿದ್ದರು. ಸಂಯೋಜಕ ವಾದಿರಾಜ್ ಹಾಗೂ ಕಾರ್ಯದರ್ಶಿ ತಿಪ್ಪೇಸ್ವಾಮಿ ಇದ್ದರು. ಶಿವಾನಂದ ಸ್ವಾಗತಿಸಿದರು. ವಿಜಯಲಕ್ಷ್ಮೀ ವಂದಿಸಿದರು.



**ಮೈಸೂರಿನಲ್ಲಿ ಏರ್ಪಡಿಸಿದ್ದ ವಿವೇಕಾನಂದ ವಿಚಾರಗೋಷ್ಠಿಯಲ್ಲಿ ಪ್ರಬಂಧ ವಿಜೇತರಿಗೆ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧೀಶ ನಿರ್ಮಲಾನಂದನಾಥ ಸ್ವಾಮೀಜಿ ಬಹುಮಾನ ವಿತರಿಸಿದರು.**